17-10-2026

INTERNATIONAL DAY FOR ERADICATION OF POVERTY

Vidyavardhaka Sangha ®

Vidyavardhaka First Grade College

Sheshadri Iyer Road, Mysuru

IQAC & Department of Economics

Jointly Organising

"International Day For Eradication Of Poverty"

.....Safe Homes For All

Chief Guest

Smt. Manasa

Founder, Savinenapu Foundation,

Belvatta, Mysuru.

Dr.S.MariGowda	Prof.Shahsidhar S	Prof.Pavithra T
Principal, VVFGC, Mysuru	Staff Advisor	Dept. Of Economics

Venue : Room No. 111| Date : 17-10-2026 | Time 11.00 AM

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದಾಗ ಮಾತ್ರ ಬಡತನ ನಿರ್ಮೂಲನೆ ಸಾಧ್ಯ

ಬಡತನವು ಜಗತ್ತಿನ ಪ್ರಮುಖ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಲ್ಲಿ ಒಂದಾಗಿದೆ. ಬಡತನವನ್ನು ನಿರ್ಮೂಲನೆ ಮಾಡಿ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳನ್ನು ಕಲ್ಪಿಸುವ ಉದ್ದೇಶ ಪ್ರಸ್ತುತ ಈ ದಿನದ ವಿಶೇಷವಾಗಿದೆ ಎಂದು ಮೈಸೂರಿನ ಸವಿನೆನಪು ಸಂಸ್ಥೆಯ ಸಂಸ್ಥಾಪಕಿ ಶ್ರೀಮತಿ ಮಾನಸ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಐ.ಕ್ಯೂ.ಎ.ಸಿ ಘಟಕ ಹಾಗೂ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಬಡತನ ನಿರ್ಮೂಲನ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯು ಬೆಳೆಯುವ ಹಂತದಲ್ಲಿ ಸಮಾಜದಿಂದ ಹಲವಾರು ಸವಲತ್ತುಗಳನ್ನು ಪಡೆದಿರುತ್ತಾನೆ. ಅವನ ವ್ಯಕ್ತಿತ್ವ ವಿಕಸನಕ್ಕೆ, ಉನ್ನತಿಗೆ ಪರೋಪಕಾರ ಸಹಕಾರಿಯಾಗಿರುತ್ತದೆ. ವ್ಯಕ್ತಿ ಸುಸ್ಥಿರ ಅಭಿವೃದ್ಧಿ ಕಂಡ ನಂತರ ಅದನ್ನು ನೆನೆದು ತನ್ನ ಕೈಯಲ್ಲಿ ಆದಷ್ಟು ಸಹಾಯವನ್ನು ಸಮಾಜಕ್ಕೆ ಅಥವಾ ಪರರಿಗೆ ಕೊಡುಗೆಯಾಗಿ ನೀಡಬೇಕು ಆಗ ಮಾತ್ರ ಅವನ ಬದುಕು ಸಾರ್ಥಕವಾಗುವುದು. ಸವಿನೆನಪು ಸಂಸ್ಥೆಯ ವತಿಯಿಂದ ವರ್ಷಂಪ್ರತಿ ಆಸ್ಪತ್ರೆಯ ರೋಗಿಗಳಿಗೆ ಮಕ್ಕಳಿಂದಲೇ ಸಹಾಯವನ್ನು ಮಾಡಲು ಸೂಚಿಸುವುದು ಕಾರಣ ಮಕ್ಕಳಿಗೆ ಬೆಳೆಯುವ ಹಂತದಲ್ಲೇ ಪರಸ್ಪರ ಸ್ಪಂದಿಸುವ ಗುಣ ಮತ್ತು ಸಂಸ್ಕಾರವನ್ನು ಬೆಳೆಸಲು ಸಹಕಾರಿಯಾಗುತ್ತದೆ. ವಿಶ್ವಸಂಸ್ಥೆಯ ಪ್ರಕಾರ ಪ್ರಸ್ತುತ ಇನ್ನೂ ೨೫೦ ಕೋಟಿ ಜನರಿಗೆ ವಸತಿ ಸೌಲಭ್ಯವಿಲ್ಲ ಎಂದು ವರದಿ ಮಾಡಿದೆ. ಇದಕ್ಕೆ ಬಡತನ ತೀವ್ರತೆ ಕಾರಣ ಹಾಗಾಗಿ ಒಂದು ದೇಶ ಒಂದು ಭಾಷೆ ಒಂದು ಜಾತಿ ಒಂದು ಕಾಲಘಟ್ಟವನ್ನು ಮೀರಿ ನಾವು ವಿಶಾಲ ಮನೋಭಾವದಿಂದ ಆಲೋಚಿಸಬೇಕಾಗುತ್ತದೆ. ಜಗತ್ತಿನ ಬಡತನವನ್ನು ನಿರ್ಮೂಲನೆ ಮಾಡಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಶ್ರೀಹರ್ಷ ಅವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತಾ ಯಾವುದೇ ಸರ್ಕಾರಗಳು ಪ್ರಸ್ತುತ ಇರುವ ಬಡತನವನ್ನು ನಿರ್ಮೂಲನೆ ಮಾಡಲು ಹಲವಾರು ಯೋಜನೆಗಳನ್ನು ರೂಪಿಸುತ್ತದೆ. ಸಮಾಜದ ಸಮಗ್ರ ಅಭಿವೃದ್ಧಿಗಾಗಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತನ್ನು ನೀಡಿದರೆ ಬಡತನ ತನಗೆ ತಾನೇ ನಿರ್ಮೂಲನೆಯಾಗಿ ಸಮಾಜದ ಸುಸ್ಥಿರ ಅಭಿವೃದ್ಧಿಯಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅರ್ಥಶಾಸ್ತ್ರ ವಿಭಾಗದ ಶ್ರೀಮತಿ ಪವಿತ್ರ.ಟಿ ಸ್ವಾಗತಿಸಿದ ಕಾರ್ಯಕ್ರಮದಲ್ಲಿ ಅಧ್ಯಾಪಕ ಸಲಹೆಗಾರ ಶ್ರೀ.ಶಶಿಧರ್, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿನಿ ಕು.ಕಲ್ಯಾಣಿ ನಿರೂಪಿಸಿ ವಂದಿಸಿದರು.


Smt. Pavithra T
Smt. Manasa
Dr. Shrilaksha B.S


Smt. Pavithra T
Smt. Manasa
Dr. Shrilaksha B.S






Smt. Manasa
Dr. Shrilaksha B.S

